

ಕೋಪನ್‌ಹೆಗನ್‌ನಲ್ಲಿ ಪರಿಸರವಾದಿಗಳ ಜೊತೆ ಕಲಾವಿದರೂ ಟೆಂಟ್ ಹಾಕಿ ಕೂತಿದ್ದಾರೆ. ಎಲ್ಲರ ಕೆಂಗಣ್ಣೂ ದೊಡ್ಡಣ್ಣ ಅಮೆರಿಕದ ಮೇಲೆ. ಅಮೆರಿಕ ಹೇಗೆ ಸಣ್ಣ ರಾಷ್ಟ್ರಗಳ ಕತ್ತಿನ ಮೇಲೆ ಕೂತಿದೆ ಎಂದು ಒಬ್ಬ ಕಲಾವಿದನಿಗೆ ಇನ್‌ಸ್ಟಂಟ್ ಐಡಿಯಾ ಹೊಳೆದು ಕಲಾಕೃತಿ ಮಾಡಿಟ್ಟಿದ್ದಾನೆ ನೋಡಿ.

ಫಿಲಿಪ್ಪೀನ್ ವಿಶ್ವವಿದ್ಯಾನಿಲಯದ ಹುಡುಗರಿಗೆ ಡಿಸೆಂಬರ್ ಬಂತೆಂದರೆ ಚಳಿ ಮಾಯವಾಗಿಬಿಡುತ್ತದೆ. ಮೈ ಮೇಲಿರುವ ಉಡುಪೂ ಸಹ ಬಿಸಿಯೆನಿಸುತ್ತದೆ. ಎಲ್ಲವನ್ನೂ ಕಿತ್ತೆಸೆದು ವಿವಿ ಆವರಣದ ಸುತ್ತ ಓಡಿ ಬರುವುದು ಅಂದಕಾಲತ್ತಿನ ಸಂಪ್ರದಾಯ. ಈ ಬಾರಿ ಭೂಮಿ ಬಿಸಿಯೇರುವುದರ ವಿರುದ್ಧ ಈ ಬಟ್ಟೆಬಿಚ್ಚುವ ಚಳುವಳಿಯಂತೆ.



ನ್ಯೂಜಿಲೆಂಡ್ ಬಂದರು ಬಳಿ ಡಾಲ್ಫಿನ್ ಒಂದು ಬೀಡುಬಿಟ್ಟಿದೆ. ಸಮುದ್ರಕ್ಕೆ ಇಳಿದ ನೀರೆಯರ ಜೊತೆ ಆಟವಾಡುವುದೆಂದರೆ ಭಾರಿ ಖುಷಿಯಂತೆ. ಪುರುಷರೇನಾದರೂ ಬಳಿ ಸುಳಿದರೆ ದಾಳಿ ನಡೆಸುವುದಂತೆ. ಹೀಗಾಗಿ ಅಧಿಕಾರಿಗಳು ಇದು ಗಂಡು ಡಾಲ್ಫಿನ್ ಎಂಬ ತೀರ್ಮಾನಕ್ಕೆ ಬಂದಿದ್ದು ವಿಷಯವನ್ನು ಸಂಶೋಧಕರಿಗೆ ವರ್ಗಾಯಿಸಿದ್ದಾರೆ.



ಈ ನಾಯಿ 'ಫೇತ್' ಹಣೆಬರಹ ನೋಡಿ. ಆದರೆ ಹಿಂಗಾಲು ಹೀಗಾಗಿದೆಯಲ್ಲ ಎಂದು ಕೊರಗುತ್ತ ಕೂರುವ ಹಾಗೂ ಇಲ್ಲ. ಓಡು, ಓಡಾಡು ಎಂದು ಮಾಲಕಿ ಮಿಚಿಗನ್ ಪಾದಚಾರಿ ಮಾರ್ಗದ ಮೇಲೆ ವಾಯುವಿಹಾರಕ್ಕೆ ಒಯ್ದಿದ್ದಾಳೆ. ಈ ಪೇವ್‌ಮೆಂಟ್ ಈಗ ವಂಡರ್‌ಮೆಂಟ್ ಆಗಿಬಿಟ್ಟಿದೆ.

ಓಹಿಯೊ ಗ್ರಂಥಾಲಯದಿಂದ ಪುಸ್ತಕವನ್ನು ಕದ್ದೊಯ್ದವನೊಬ್ಬ 60 ವರ್ಷಗಳ ನಂತರ ಹಿಂದಿರುಗಿಸಿದ್ದಾನೆ. ಅಂಚೆಯಲ್ಲಿ ಬಂದ ಈ 'ನೆಪೋಲಿಯನ್' ಪುಸ್ತಕದ ಜೊತೆ ಟಿಪ್ಪಣಿ ಬೇರೆ. 60 ವರ್ಷಗಳ ಕಾಲ ತಪ್ಪನ್ನು ಹೊಟ್ಟೆಯಲ್ಲಿ ಇಟ್ಟುಕೊಳ್ಳುವುದು ಇಷ್ಟು ಕಷ್ಟವಾ? ಈಗ ಇಹಲೋಕದ ಪಾಪವನ್ನೆಲ್ಲ ತೊಳೆದುಕೊಂಡು ಪರಲೋಕದ ಪುಣ್ಯ ಕಟಿಕೊಳ್ಳುವ ವಯಸ್ಸು. ಅದಕ್ಕೇ ವಾಪಸ್ಸು ಬಂದಿದೆ ಎಂದಳಂತೆ ಜಾಣೆ ಗ್ರಂಥಪಾಲಕಿ.



ಕಾಂಬೋಡಿಯಾದ ಹೀನ್‌ಗೆ ಏನಾದರೂ ಸಾಧಿಸುವ ಹುಚ್ಚು. ಬಡ ರಾಷ್ಟ್ರದಲ್ಲಿ ಚಿನ್ನದ ಬಣ್ಣದ ಕಾರಿನಲ್ಲಿ ಓಡಾಡಿ ಚೆನ್ನೆಯರ ಮನ ಕದಿಯಲು ನೋಡಿದ. ಜನ ಛೀ, ಥೂ ಎಂದರು. ಅದಕ್ಕೇ ಈಗ ಹೊಸ ವರಸೆ. ಈ ಕಾರು ಪೆಟ್ರೋಲ್‌ನಿಂದ ಓಡಲ್ಲವಂತೆ, ಚಲಾಯಿಸಲೂ ಬುದ್ಧಿ ಬೇಡವಂತೆ. ಬೇಕಾಗಿರುವುದು ಟೆಲಿಪಥಿ ಎಂದು ಪ್ರಚಾರ ಮಾಡುತ್ತಿದ್ದಾನೆ. ಒಂದು ಥರ ರಿಮೋಟ್ ಇದ್ದ ಹಾಗೆ.

ಇಂಗ್ಲೆಂಡ್ ರಾಜಕುವರ ಚಾರ್ಲ್ಸ್ ಎರಡು ವರ್ಷಗಳ ಹಿಂದೆ ಉಗಾಂಡಾಗೆ ಭೇಟಿ ನೀಡಿದಾಗ ಜೇಬು ಬರಿದೋ ಬರಿದು. ಭದ್ರತಾ ಸಿಬ್ಬಂದಿಯಿಂದ 3000 ರೂಪಾಯಿ ಕೈಗಡ ತೆಗೆದುಕೊಂಡರಂತೆ. ನಂತರ ಅರಮನೆ ಹಣಕಾಸು ವಿಭಾಗ ಈ ಹಣವನ್ನು ಪಾವತಿ ಮಾಡಿತು. ವರ್ಷಕ್ಕೆ 30 ಲಕ್ಷ ಪೌಂಡ್ ಹಣವನ್ನು ತೆರಿಗೆದಾರರಿಂದಲೇ ಜೇಬಿಗಿಳಿಸುವ ಚಾರ್ಲ್ಸ್‌ಗೆ ಈ ಪರಿಸ್ಥಿತಿ ಬರಬಾರದಿತ್ತು ಎಂಬ ಸುದ್ದಿಗೆ ರೆಕ್ಕೆಪುಕ್ಕ ಬಲಿಯುತ್ತಿದೆ. ಆದರೆ ರಾಜಕುವರ ಸಾಮಾನ್ಯರಂತೆ ಜೇಬಿನಲ್ಲಿ ಹಣವಿಟ್ಟುಕೊಂಡು ಓಡಾಡುವುದೇ?

ಕೋಪನ್‌ಹೆಗನ್ ಹವಾಮಾನ ವೈಪರೀತ್ಯ ಶೃಂಗಸಭೆಗೆ ಬಂದ ಪ್ರತಿನಿಧಿಗಳಿಗೆ ಅಲ್ಲಿ ಒಂದು ಸೇವೆ ಮಾತ್ರ ಉಚಿತ. ಲೈಂಗಿಕ ಕಾರ್ಯಕರ್ತೆಯರು ಈ ಘೋಷಣೆ ಮಾಡಿದ್ದು ಹೈವೇನಲ್ಲಿ ಸೇವೆ ಒದಗಿಸುತ್ತಿರುವ ವೈಖರಿಯಿದು. ಆದರೆ ಡೆನ್ಮಾರ್ಕ್ ಸರ್ಕಾರ ಮಾತ್ರ ಪ್ರತಿನಿಧಿಗಳ ಮೇಲೆ ಹದ್ದಿನ ಕಣ್ಣಿಟ್ಟಿದೆ.

